

2

ಗುರುವಿನ ಆಜ್ಞೆಗೆ ಶಿರಬಾಗಿದನು ಶಿಷ್ಯ.
‘ದಮ್ಮಡಿ ಇಲ್ಲದ ಕೈಯಲ್ಲಿ ಶಂಕರಿಯ ಮೋಹ!
ತಣಿವುದಾದರೂ ಎಂತು ಶಂಕರಿಯ ದಾಹ?’
ನಿಸ್ತೇಜ ನೋಟದಲಿ ಗುರುವ ನೋಡಿದ ಶಿಷ್ಯ
‘ತಾನು ತನಗೆ ಬರಿಗೈಯಿ ಅವನು ನಾನು ಬರಿಗೈಯಿ
ಅವನು ನಾನು ನಾನು ಅವನು ಬರಿಗೈಯಿ
ತೀಟೆ ಬೇಟಕೆ ಎಳಸಿದೆ ನಾಲಗೆಯ ದಾಹ
ದಾಹಕ್ಕೆ ದಾಹ ದಾಸೋಹವಿಲ್ಲದ ದಾಹ.’

ನೇರ ನೋಡಿದ ಗುರುವು ಗರ್ಭಗುಡಿ ಅವ್ವನನು
ಮಿಂಚಂತೆ ಸಂಚರಿಸಿ ದಾಹದ ಕಣ್ಣಿಗೆ ಬಿತ್ತು ನತ್ತು.
ಎದ್ದವನು ಎದ್ದಂತೆ ಮುಂದೆ ನಡೆದನು ಗುರುವು
ಹೊದ್ದಿದ್ದ ಧೋತ್ರವದು ಬಿದ್ದ ಸದ್ದಿಗೆ ಧರೆ ನಡುಗಿತ್ತು

ಧೀರನಂದದಿ ಕಿತ್ತು ತಂದಾ ನತ್ತ
ಅವ್ವನ ಮೂಗಿನ ನತ್ತ
ಮೊನ್ನೆ ಮಾಡಿಸಿದಾ ನತ್ತ
ಅವ್ವನಿಗೆ ಹಾಕಿದಾ ನತ್ತ
ಅಚಾನಕ್ಕಾಗಿ ಆಚಾರಿಯ ಕಂಡು
ಕುಶಾಲಿಗೆ ಮಾಡಿಸಿದಾ ನತ್ತ.

ತಂದವನು ತಂದಂತೆ
ಶಿಶುನಾಳನ ಹಸ್ತದೊಳಗಿಟ್ಟಾ ನತ್ತ
ನತ್ತಿನಾ ಭಾರಕ್ಕೆ ಬೆಬ್ಬಳಿಸಿದನು ಶಿಶುನಾಳ.



‘ಏನು ಗುರುವೇ? ಏನಿದೇನಿದು?
ದಮ್ಮಡಿಗೆ ಬದಲು ನತ್ತೆ!?’

‘ಇದ್ದಾಗ ತೊಡಿಸಿದ್ದು
ಇಲ್ಲದಾಗ ಬಿಡಿಸಿದ್ದು
ಬಿಡಿಸಿದ್ದು ತೊಡಿಸಿದ್ದು
ಕೊಡಿಸಿದ್ದು ಬಿಡಿಸಿದ್ದು
ಬಿಡಿಸಿದಂತೆಯೆ ದಾಹ
ತೊಡಿಸಿದಂತೆಯೆ ಮೋಹ
ದಾಹ ಮೋಹದ ಪರಿಗೆ
ದಮ್ಮಡಿಯ ಕಿಮ್ಮತ್ತೆ?
ತರಹೋಗು ಬೇಗ
ಕರೆಯುತಿದೆ ಶಂಕರಿಯ ದಾಹ.’